ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ ನಾಕಥೇರಿ ಹೊಸಹಳ್ಳಿ

ಸಂ/ಕಂ/ಹ.ಬ./ನಾಕಹೊ/12/2016-17. ದಿನಾಂಕ:25-07-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಎಸ್.ದೇವರಾಜ ತಂದೆ ಲೇಟ್ ಎಸ್.ನಾಗೇಂದ್ರಪ್ಪ.<br>2)ಎಸ್.ಸಿದ್ದಪ್ಪ ತಂದೆ ಲೇಟ್ ಎಸ್.ನಾಗೇಂದ್ರಪ್ಪ.<br>3)ವೀರಣ್ಣ ಶಾಂತನಹಳ್ಳಿ ಗಂಡ ಲೇಟ್ ಎಸ್. ನಾಗೇಂದ್ರಪ್ಪ.<br>ಸೂಲದಹಳ್ಳಿ ಗ್ರಾಮ. ಕೂಡ್ಲಿಗಿ ತಾಲೂಕು | ಕಂದಾಯ ಪರಿವೀಕ್ಷಕರು<br>ಹೊಸಹಳ್ಳಿ |
| ಕೂಡ್ಲಿಗಿ ತಾಲೂಕು ಸೂಲದಹಳ್ಳಿ ಗ್ರಾಮದ ಸನಂ 526ಎ. ವಿಸ್ತೀರ್ಣ 0-88 ಸೆಂಟ್ಸು ಜಮೀನನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಸೂಲದಹಳ್ಳಿ ಗ್ರಾಮದ ಸನಂ 526ಎ. ವಿಸ್ತೀರ್ಣ 0-88 ಸೆಂಟ್ಸು ಜಮೀನನ್ನು ಸದರಿ ಗ್ರಾಮದ ಎಸ್.ದೇವರಾಜ ತಂದೆ ಲೇಟ್ ಎಸ್.ನಾಗೇಂದ್ರಪ್ಪ ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಸೂಲದಹಳ್ಳಿ ಇವರು ನಮೂನೆ-21 ನೋಟಿಸನ್ನು ದಿನಾಂಕ 10-03-2015. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಅರ್ಜಿದಾರರು ಮರಣ ದೃಡಿಕರಣ ಪತ್ರ ಸಲ್ಲಿಸಿಲ್ಲದ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 68/2014-15. ದಿನಾಂಕ 10-04-2015. ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 11-04-2016. ರಿಂದ 25-07-2016. ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಜರಾಗಿರುತ್ತಾರೆ. ಅರ್ಜಿದಾರು ಸೂಲದಹಳ್ಳಿ ಗ್ರಾಮದ ಸನಂ 526ಎ. ವಿಸ್ತೀರ್ಣ 0-88 ಸೆಂಟ್ಸು ಜಮೀನು ನಮ್ಮ ತಾತನವರಾದ ಶಾಂತನಹಳ್ಳಿ ತಿಪ್ಪಯ್ಯ ತಂದೆ ಬಸಪ್ಪ ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇರುತ್ತದೆ. ಇವರು ದಿನಾಂಕ 10-08-2013 ರಂದು ಹಾಗೂ ನನ್ನ ಅಜ್ಜಿ ಸಿದ್ದಮ್ಮ ಗಂಡ ತಿಪ್ಪಯ್ಯ ಇವರು ದಿನಾಂಕ 05-05-2015 ರಂದು ಹಾಗೂ ನಮ್ಮ ತಂದೆಯವರಾದ ನಾಗೇಂದ್ರಪ್ಪ ತಂದೆ ತಿಪ್ಪಯ್ಯ ಇವರು 07-06-2015 ರಂದು ಹಾಗೂ ನಮ್ಮ ತಾಯಿಯವರಾದ ಬೊಮ್ಮಕ್ಕ ಗಂಡ ನಾಗೇಂದ್ರಪ್ಪ ಇವರು ದಿನಾಂಕ 18-06-2015 ರಂದು ನಿಧನ ಹೊಂದಿರುತ್ತಾರೆ. ಕಾರಣ ಪೋತಿವಾರಸು ಹಕ್ಕಿನ ಪ್ರಕಾರ ನಮ್ಮಗಳ ಹೆಸರಲ್ಲಿ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆಗಳನ್ನು ಕೇಳಿ ಅರ್ಜಿದಾರರು ಸೂಕ್ತ ದಾಖಲೆಗಳನ್ನು ಸಲ್ಲಿಸಿರುವ ಕಾರಣ ಅರ್ಜಿದಾರರ ಕೋರಿಕೆಯನ್ವಯ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಸೂಲದಹಳ್ಳಿ ಗ್ರಾಮದ ಸನಂ 526ಎ. ವಿಸ್ತೀರ್ಣ 0-88 ಸೆಂಟ್ಸ್ ಜಮೀನನ್ನು ಪೋತಿವಾರಸು ಹಕ್ಕಿನ ಪ್ರಕಾರ ಅರ್ಜಿದಾರರಾದ ಎಸ್.ದೇವರಾಜ ತಂದೆ ಲೇಟ್ ಎಸ್.ನಾಗೇಂದ್ರಪ್ಪ. ಎಸ್.ಸಿದ್ದಪ್ಪ ತಂದೆ ಲೇಟ್ ಎಸ್.ನಾಗೇಂದ್ರಪ್ಪ. ವೀರಣ್ಣ ಶಾಂತನಹಳ್ಳಿ ತಂದೆ ಲೇಟ್ ಎಸ್.ನಾಗೇಂದ್ರಪ್ಪ. ಇವರುಗಳ ಹೆಸರಲ್ಲಿ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 25-07-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಹೊಸಹಳ್ಳಿ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಎಸ್.ದೇವರಾಜ ತಂದೆ ಲೇಟ್ ಎಸ್.ನಾಗೇಂದ್ರಪ್ಪ. ಎಸ್.ಸಿದ್ದಪ್ಪ ತಂದೆ ಲೇಟ್ ಎಸ್.ನಾಗೇಂದ್ರಪ್ಪ. ವೀರಣ್ಣ ಶಾಂತನಹಳ್ಳಿ ತಂದೆ ಲೇಟ್ ಎಸ್.ನಾಗೇಂದ್ರಪ್ಪ. ಸೂಲದಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ಕಂದಾಯ ಪರಿವೀಕ್ಷಕರು ಹೊಸಹಳ್ಳಿ ಇವರ ಮಾಹಿತಿಗಾಗಿ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.